ಪಿತ್ತ ನೆತ್ತಿಗೇರಿಸಿಕೊಂಡ ಕರಿಬಸಯ್ಯ ಜಗಳಕ್ಕೆ ನಿಂತ... 'ಶಿವಪ್ಪನೋರೆ ನೀವು ಹಿರಿಯರು... ಹಿರಿಯರಂತೆ ನಡ್ಕೊಳಿ... ಈ ಹಿಂದ ನೀವು ಸುಟ್ಟು ಹಾಕು ಅಂತ ಹೇಳಿದ್ದಿರಲ್ಲ ಆ ಕತೆಗಳ ಸಂಕಲನಕ್ಕೆ ಬಹುಮಾನ ಕೊಟ್ಟಾರ... ನಿಮ್ಮಂತೋರು ನಮ್ಮ ಗುರುಗಳು ಆಗಿದ್ದು ನಮ್ಮ ಕರ್ಮ. ಮನಿಗಿ ಕಾಯಿಪಲ್ಯೆ ತರೋ ದಡ್ಡರಿಗೆ ರ್‍ಯಾಂಕ್ ಕೊಟ್ರಿ... ನಿಮ್ಮ ಜೊತೆ ಕೋಆಪರೇಟ್ ಮಾಡೋ ಹುಡುಗಿಯರಿಗೆ ಪಿಎಚ್.ಡಿ. ಗೈಡ್ ಆದ್ರಿ... ಮುಪ್ಪಿನ ಕಾಲಕ್ಕಾದರೂ ಬುದ್ಧಿ ಕಲೀರಿ... ನಿಮಗ ನೋಡಿದಾಗಲೆಲ್ಲ ಕ್ಯಾಕರಿಸಿ ಉಗಿಬೇಕನಿಸ್ತದ' ಎಂದು ಬೈಗುಳಗಳ ಮಳೆ ಸುರಿದು ಹೊರಟೇಬಿಟ್ಟ. ಪ್ರೊ. ಶಿವಪ್ಪನವರ ಬಾಯಿಂದ ಮಾತೇ ಹೊರಡಲಿಲ್ಲ... ಕರಿಬಸಯ್ಯನ ಸಿಟ್ಟು ನೋಡಿ ಕುಸಿದು ಹೋದರು...

ಹಾಗೆ ನೋಡಿದರೆ, ಕರಿಬಸಯ್ಯನಿಗೆ ಸಿಟ್ಟು ಬಂದಿದ್ದು ಇದು ಎರಡನೇ ಬಾರಿ. ಎಂ.ಎ. ಅಂತಿಮ ವರ್ಷದಲ್ಲಿರುವಾಗ ಕರಿಬಸಯ್ಯ ಪ್ರೀತಿ ಮಾಡುತ್ತಿರುವ ಹುಡುಗಿಗೆ ಕ್ಲಾಸಿನಲ್ಲೇ ಹೆಗಲ ಮೇಲೆ ಕೈಹಾಕಿ ಪ್ರೊ. ಶಿವಪ್ಪನವರು ಬೆನ್ನು ಸವರಿದ್ದರು. ಕೆಂಡಾಮಂಡಲವಾಗಿದ್ದ ಕರಿಬಸಯ್ಯ ಹಾವಭಾವದಲ್ಲೇ ಸಿಟ್ಟನ್ನು ವ್ಯಕ್ತಪಡಿಸಿದ್ದ. ಸಿಟ್ಟು ಬೈಗುಳ ರೂಪ ಪಡೆದಿರಲಿಲ್ಲ. ಕರಿಬಸಯ್ಯ ದಿಟ್ಟಿಸುತ್ತಿರುವ ಪರಿಯಿಂದಲೇ ಶಿವಪ್ಪ ಎಲ್ಲವನ್ನೂ ಗ್ರಹಿಸಿದ್ದರು. ಹಾಗಿದ್ದೂ ಹುಡುಗಿಯರ ಬೆನ್ನ ಮೇಲೆ ಕೈಯಾಡಿಸುವ ಚಟ ಬಿಟ್ಟಿರಲಿಲ್ಲ. ನಿವೃತ್ತಿಯಾದ ಮೇಲೆ ಪ್ರೊ. ಶಿವಪ್ಪನವರಿಗೆ ಹುಡುಗಿಯರೇ ಸಿಗುತ್ತಿರಲಿಲ್ಲ. ವರ್ಷಕ್ಕೊಮ್ಮೆ ಮದುವೆ ಕಾರ್ಡು ಕೊಡಲು ಬರುತ್ತಿದ್ದ ಹುಡುಗಿಯರ ಬೆನ್ನು ಸವರಲು ಹಾತೊರೆಯುತ್ತಿದ್ದ ಹಳೆ ಚಾಳಿಯಿಂದ ಒಮ್ಮೆ ಖಾಸಾ ಸೊಸೆಯ ಬೆನ್ನು ಸವರಿ ಇದ್ದೊಬ್ಬ ಮಗನಿಂದಲೇ ಉಗಿಸಿಕೊಂಡಿದ್ದರು.

ಕರಿಬಸಯ್ಯನ ಬೈಗುಳ ಗುಂಗಿನಲ್ಲೇ ಮನೆ ಸೇರಿಕೊಂಡಿದ್ದರು. ಯಾಕಾದರೂ ಕೆಣಕಿದೆನೋ ಎಂದು ಹತ್ತಾರು ಬಾರಿ ಪರಿತಪಿಸಿದ್ದರು... ಶಿವಪ್ಪನವರಿಗೆ ಶುಗರ್ ಲೆವೆಲ್ ಹೆಚ್ಚಾಗಿ ಸುಸ್ತಾಗಿರಲಿಲ್ಲ. ಕರಿಬಸಯ್ಯನ ಮಾತುಗಳು ಘಾಸಿಗೊಳಿಸಿದ್ದವು... ಮನೆ ಮನ ಭಣಗುಡುತೊಡಗಿದವು... ಅಡುಗೆ ಮನೆಯಲ್ಲಿ ಹೆಂಡತಿ ಸಪ್ಪಳ ಮಾಡತೊಡಗಿದ್ದಳು. ಜಳಕಕ್ಕೆ ಹೋಗಬೇಕೆಂದುಕೊಂಡರೂ 'ತೊಳೆದುಕೊಳ್ಳಲಾಗದು' ಎನಿಸಿತು. ಮಗಳು ಗಂಡನ ಮನೆಗೆ ಹೋಗೋದು ಅನಿವಾರ್ಯವಾಗಿ ಹೋಗಿದ್ದಳು. ಆದರೆ, ಮಗ ಅಪನಂಬಿಕೆಯಿಂದ ಮನೆಬಿಟ್ಟು ಹೋಗಿದ್ದ. ಕರಿಬಸಯ್ಯನ ಇಂದಿನ ಅವತಾರದಲ್ಲಿ ಶಿವಪ್ಪನವರಿಗೆ ಮಗನೇ ಕಾಣಿಸುತ್ತಿದ್ದ. ಹೆಂಡತಿ ಜಳಕಕ್ಕೆ ಬರ್ರೀ ಅಂತ ಹತ್ತಾರು ಬಾರಿ ಕರೆದಾಗಲೂ ಹಾಸಿಗೆಯಿಂದ ಕದಲಲಿಲ್ಲ... ಸಣ್ಣಗೆ ಕಂಪಿಸತೊಡಗಿದರು...

## ರಾಜಶೇಖರ ಹತಗುಂದಿ

ಕತೆಗಾರರು ಕಲಬುರ್ಗಿ ಜಿಲ್ಲೆಯ ಹತಗುಂದಿಯವರು. ಓದಿದ್ದು ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ, ಕನ್ನಡದಲ್ಲಿ ಎಂ.ಎ. 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯ ಮೂಲಕ ಬೆಳಕಿಗೆ ಬಂದ ಕತೆಗಾರ. 'ಕಾಳ ಬೆಂಳುದಿಂಗಳ ಸಿರಿ', 'ಬುದ್ಧನ ನಾಡಿನಲ್ಲಿ', 'ಬಯಲು ಹುಡಿ', 'ಎಡ ಹೊತ್ತಿನ ಪಯಣ' ಅವರ ಪ್ರಮುಖ ಪ್ರಕಟಿತ ಕೃತಿಗಳು. ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹತಗುಂದಿ ಅವರು ಮಧ್ಯಪ್ರದೇಶದ ಅಮರಕಂಟಕದಲ್ಲಿರುವ ಇಂದಿರಾಗಾಂಧಿ ರಾಷ್ಟ್ರೀಯ ಆದಿವಾಸಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು ಕೂಡ.